ಶ್ರೀ ಎಂ. ನಾಗಪ್ಪ.—ನಕ್ಸೆಲೈಟ್ಸ್ ಮಾಡಿರಬೇಕು ಎಂಬ ಊಹೆ ಸರ್ಕಾರಕ್ಕೆ ಬಂದಮೇಲೆ ನಮ್ಮ ರಾಜ್ಯದಿಂದ ಅವರನ್ನು ಬೇರೆ ಕಡೆಗೆ ಕಳುಹಿಸುವುದಕ್ಕೆ ಕಾರ್ಯಕ್ರಮ ಕೈಗೊಳ್ಳುತ್ತದೆಯೇ? ಹಾಗಿದ್ದರೆ ಈ ಸಂದರ್ಭದಲ್ಲಿ ಯಾವ ತರಹದ ಕ್ರಮ ಕೈಕೊಂಡಿದೆ ಎಂಬುದನ್ನು ತಾವು ದಯಮಾಡಿ ತಿಳಿಸಬೇಕು.

ಶ್ರೀ ವೀರೇಂದ್ರ ಪಾಟೀಲ್.—ಅವರು ಆರ್ಮ್ಡ್ ಸೈನ್ಸ್ ಆಗಿ ಮಾಡುತ್ತಿಲ್ಲ, ಅಲ್ಲಲ್ಲಿ ಸೇರಿಕೊಂಡು ಕೆಲವು ಜನ ರಾತ್ರಿ ಹೊತ್ತು ಇಂತಹ ಪೋಸ್ಟರ್ಸ್‌ನ್ನು ಹಚ್ಚುತ್ತಾರೆ. ನಕ್ಸೆಲೈಟ್ಸ್ ನಮ್ಮಸ್ಯೆ ಹೆಚ್ಚಿನದಾದ ಪ್ರಮಾಣದಲ್ಲಿ ನಮ್ಮ ಸಂಸ್ಥಾದಲ್ಲಿ ಇಲ್ಲ. ರಾತ್ರಿ ಹೊತ್ತು ಇಂತಹ ವಾರ್ ಪೋಸ್ಟರ್ಸ್‌ನ್ನು ಹಚ್ಚುತ್ತಾ ಇದ್ದಾಗ 4—5 ಜನ ಸಿಕ್ಕಿಬಿದ್ದರು ಅವರಮೇಲೆ ಕ್ರಮ ತೆಗೆದು ಕೊಂಡಿದ್ದೇವೆ.

ಶ್ರೀ ಎನ್. ಎ. ಚನ್ನೇಗೌಡ.—ಈಗ ಶಿಕ್ಷೆಗೆ ಗುರಿಯಾಗಿರತಕ್ಕವರು ಚೈನೀಸ್ ಎಂಬೆಸಿಯಿಂದ ಹಣ ಪಡೆಯುತ್ತಾ ಇದ್ದರು ಎಂಬುದು ಗೊತ್ತ?

ಶ್ರೀ ವೀರೇಂದ್ರ ಪಾಟೀಲ್.—ಅಷ್ಟೆಲ್ಲಾ ವಿವರ ಇಲ್ಲ.

ಶ್ರೀ ಎನ್. ರೋಕಯ್ಯನಾಯಕ್.—ಈ ಪೋಸ್ಟರುಗಳು ನಮ್ಮ ದೇಶದಲ್ಲಿ ತಯಾರಾದದ್ದೆ ಅಥವಾ ಚೈನಾ, ರಷ್ಯಾ ದೇಶದಿಂದ ಬಂದದ್ದೆ?

ಶ್ರೀ ವೀರೇಂದ್ರ ಪಾಟೀಲ್.—ಈ ಪೋಸ್ಟರುಗಳು ಪ್ರಿಂಟ್ ಮಾಡಿದವಲ್ಲ, ಕೈಯಲ್ಲಿ ಬರೆದವು. ಚೈನಾದಿಂದ ಬಂದದ್ದು ಅಂತ ಹೇಳಲಕ್ಕೆ ಆಗುವುದಿಲ್ಲ.

Allotment of Boats under Agricultural Refinance Corporation Scheme

281. Sri RATNAKUMAR KATTEMAR (Mudabidre).—

Will the Minister of State for Ports and Fisheries be pleased to State :—

(*a*) when was the Agricultural Refinance Corporation scheme introduced ;

(*b*) (i) the rules prescribed for the grant of financial aid, such as subsidy to the fishermen for obtaining mechanised boats, and

(ii) the total amount utilised since the scheme was introduced in South Kanara District ;

(*c*) the number of boats that have been allotted to the South Kanara District since the scheme was introduced by the Government as well as by the Fish Marketing Federation in Mangalore ;

(*d*) the action taken on the representation made to the Director of Fisheries and to the Chairman of the Federation in Mangalore and to the Minister concerned for allotment of Mechanised boats to certain persons of Mangalore Taluk ?

Sri H. C. LINGA REDDY (Minister of State for Ports and Fisheries).

(*a*) 1-10-1966.

(*b*) (i) A copy of the rules is placed on the Table of the House. *

(ii) Rs. 52.70 lakhs.

(*c*) By Government.....Nil.
By Federation.....156.

(*d*) After the inception of the Co-operative Fisheries Project financed by the Agricultural Refinance Corporation in South Kanara District, all parties were directed to approach the Federation for allotment of funds.

ಶ್ರೀ ರತ್ನಕುಮಾರ್ ಕಟ್ಟೆಮಾರ್.—ಜಿಲ್ಲಾ ಮಾನುಗಾರಿಕೆ ಕಛೇರಿಯ ಅಧಿಕಾರಿಗಳೇನಾದರೂ ಬೋಟುಗಳನ್ನು ಹಂಚುವುದಕ್ಕೆ ವೈಯುಕ್ತಿಕವಾಗಿ ಅಧಿಕಾರವನ್ನು ಕೊಡಲಾಗಿದೆಯೇ ?

† ಶ್ರೀ ಎಚ್. ಸಿ. ಲಿಂಗಾರೆಡ್ಡಿ.—1966 ರಿಂದೀಚೆಗೆ ಇಲಾಖೆಯವರು ಬೋಟುಗಳನ್ನು ಕೊಡುತ್ತಿಲ್ಲ. ಫೆಡರೇಷನ್ನಿನವರು ಬೋಟುಗಳನ್ನು ಹಂಚುತ್ತಿದ್ದಾರೆ.

ಶ್ರೀ ರತ್ನಕುಮಾರ್ ಕಟ್ಟೆಮಾರ್.—ಹಾಗೊಂದುವೇಳೆ ಅಧಿಕಾರಿಗಳು ಬೋಟನ್ನು ಹಂಚಿರ ತಕ್ಕ ನಿದರ್ಶನಗಳನ್ನು ತಮ್ಮ ಗಮನಕ್ಕೆ ತಂದರೆ ಅದನ್ನು ತನಿಖೆಮಾಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಯಾವಾಗ ಹಾಗೆ ಕೊಟ್ಟಿದ್ದಾರೆಂಬುದನ್ನು ತಿಳಿಸಿದರೆ, ಅದನ್ನೂ ವಿಚಾರ ಮಾಡೋಣ.

ಶ್ರೀ ಬಿ. ಎಂ. ಇದಿನಬ್ಬ.—ಮೊದಲು ಸರ್ಕಾರದವರು ಬೋಟುಗಳನ್ನು ಕೊಡುತ್ತಿದ್ದ ಕಾಲಕ್ಕೆ ಅವರಿಗೆ ಬೇಕಾದಷ್ಟು ಅರ್ಜಿಗಳನ್ನು ಕೊಡಲಾಗಿತ್ತು. ಆ ಅರ್ಜಿಗಳನ್ನು ಈ ಪದ್ಧತಿ ಬದಲಾವಣೆ ಆದಮೇಲೆ ಯಾರ ಕಡೆಗೆ ಕಳುಹಿಸಲಾಯಿತು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಸರ್ಕಾರಕ್ಕೆ ಕೊಟ್ಟಿದ್ದ ಅರ್ಜಿಗಳನ್ನೆಲ್ಲಾ ಕೋ-ಆಪರೇಟಿವ್ ಯೂನಿಯನ್ ಅವರ ಕಡೆಗೆ ಕಳುಹಿಸಲಾಯಿತು. ಅವರು ಅವುಗಳನ್ನು ಫೆಡರೇಷನ್‌ಗೆ ಕಳುಹಿಸಿದ್ದಾರೆ ಅವರು ಇಲ್ಲಿಯವರೆಗೂ ಅಲಾಟ್‌ಮಾಡಿರತಕ್ಕ ಬೋಟುಗಳ ಸಂಖ್ಯೆ 156 ಅಲ್ಲ. ಅದಕ್ಕೂ ಹೆಚ್ಚಿಗೆ ಅಂದರೆ 173 ಬೋಟುಗಳನ್ನು ನರಬರಾಯು ಮಾಡಿದ್ದಾರೆ.

ಶ್ರೀ ಎಸ್. ಕೆ. ಆಪಾನ್.—ಇಲ್ಲಿ (ಬಿ) ಪ್ರಶ್ನೆಗೆ ಉತ್ತರವಾಗಿ 52.70 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಇವರಲ್ಲಿ ಸಾಲದ ಹಣವೆಷ್ಟು ಮತ್ತು ಸಹಾಯಧನವೆಷ್ಟು ಎಂಬುದನ್ನು ತಿಳಿಸಿದ್ದರೆ ಚೆನ್ನಾಗಿತ್ತು. ಇನ್ನು ಎರಡನೆಯದಾಗಿ ಈ ಅಗ್ರಿಕಲ್ಚರ್ ರೀಫೈನಾನ್ಸಿಂಗ್ ಹಣವನ್ನು ಒದಗಿಸುತ್ತಿತ್ತು. ಇನ್ನು ಫೆಡರೇಷನ್ ಬಂದಮೇಲೆ ಮತ್ತು ಕಾರ್ಪೊರೇಷನ್ ಜಾರಿಗೆ ಬಂದಮೇಲೆ ಹಣವನ್ನು ಯಾವ ರೂಪದಲ್ಲಿ ಒದಗಿಸಲಾಗುತ್ತಿದೆ ಎಂಬುದನ್ನು ತಿಳಿಸಿದ್ದರೆ ಚೆನ್ನಾಗಿತ್ತು; ಇನ್ನು ಮೂರನೆಯದಾಗಿ (ಡಿ)ಗೆ ಉತ್ತರವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋ-ಆಪರೇಟೀವ್ ಫಿಷರೀಸ್ ಪ್ರಾಜೆಕ್ಟ್ ಕಡೆಗೆ ಕೊಟ್ಟಿದ್ದ ಅರ್ಜಿಗಳನ್ನು ಯಾರ ಕಡೆಗೆ ಕಳುಹಿಸಲಾಯಿತು ಇವುಗಳ ವಿವರವನ್ನು ತಿಳಿಸುವರೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮೊದಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 60 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡಲಾಗಿತ್ತು. ಈಗ 120 ಲಕ್ಷವನ್ನು ಕೊಡಲಾಗಿದೆ. ಇನ್ನು ಎರಡನೆಯ ಪ್ರಶ್ನೆಗೆ ಮೊದಲು ವರ್ಷಕ್ಕೆ 80 ಬೋಟುಗಳನ್ನು ಕೊಡಲಾಗುತ್ತಿತ್ತು. ಆನಂತರ ಅದನ್ನು 100ಕ್ಕೆ ಹೆಚ್ಚಿಸಲಾಗಿತ್ತು.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈಗ ಇದಕ್ಕೆ ಏನು ಹಣವನ್ನು ಒದಗಿಸಲಾಗುತ್ತಿದೆ, ಅದರಲ್ಲಿ ರಾಜ್ಯ ಸರ್ಕಾರದವರ ಹಣ ಮತ್ತು ಕೇಂದ್ರ ಸರ್ಕಾರದವರ ಹಣ ಮತ್ತು ಸಬ್ಸಿಡಿ ಎಲ್ಲವೂ ಸೇರಿದೆ.

---

* Copy placed in the Mysore Legislature library *vide* No. 4, dated 3-9-1969.

ಶ್ರೀ ಬಿ. ಭಾಸ್ಕರ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯ ಪಾನುಗಾರಿಕೆಯ ಸಹಕಾರ ಸಂಘಕ್ಕೆ ಸರ್ಕಾರದವರು ಕೊಟ್ಟಿರತಕ್ಕ 175 ಲಕ್ಷ ರೂಪಾಯಿಗಳಲ್ಲಿ ಎಷ್ಟು ಹಣ ಆದರಲ್ಲಿ ಸಬ್ಸಿಡಿ ಮತ್ತು ಎಷ್ಟು ಹಣವನ್ನು ಆದರಲ್ಲಿ ಹಿಂದಕ್ಕೆ ಕೊಡಬೇಕಾಗಿದೆ, ಆ ಹಣವನ್ನು ವಸೂಲ್ಮಾಡುವುದಕ್ಕೆ ನಿಗದಿ ಮಾಡಿರತಕ್ಕ ಮಾರ್ಗ ಏನು ? ಇದೆಷ್ಟು ವರ್ಷಗಳ ಸ್ಕೀಮು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅಗ್ರಿಕಲ್ಚರ್ ರೀಫೈನಾನ್ಸಿಂಗ್ ಕಾರ್ಪೊರೇಷನ್ನಿನಿಂದ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಕೋಟಿ ರೂಪಾಯಿಗಳನ್ನು ಸಾಲನೀಡಬೇಕೆಂದು ತೀರ್ಮಾನವಾಗಿದೆ. ಅದರ ಮುಂದಿನ ವರ್ಷದಲ್ಲಿ ರೀಫೈನಾನ್ಸಿಂಗ್ ಕಾರ್ಪೊರೇಷನ್ನಿನವರು 7 ಕೋಟಿ ರೂಪಾಯಿಗಳನ್ನು ಮತ್ತು ರಾಜ್ಯ ಸರ್ಕಾರದವರು ಒಂದು ಕೋಟಿ ರೂಪಾಯಿಗಳನ್ನು ಹೀಗೆ ಒಟ್ಟು 8 ಕೋಟಿ ರೂಪಾಯಿಗಳನ್ನು ಒದಗಿಸಿ 1,500 ಬೋಟುಗಳನ್ನು ಕೊಡುವುದಕ್ಕೆ ವ್ಯವಸ್ಥೆಮಾಡಲಾಗಿದೆ. ಈ ಬೋಟುಗಳನ್ನು ಮೊದಲನೇ ವರ್ಷ 200ನ್ನೂ ಆದರ ಮಾರನೆ ವರ್ಷ ಒಂದು ಸಾವಿರ ಅನಂತರ ಎರಡು ಸಾವಿರ ಬೋಟುಗಳಂತೆ ಒದಗಿಸತಕ್ಕ ಒಂದು ವ್ಯವಸ್ಥೆ ಮಾಡಲು ತೀರ್ಮಾನ ಮಾಡಿದ್ದೇವೆ.

ಶ್ರೀ ಪಿ. ಪಿ. ಐತಾಳ್.—ಸರ್ಕಾರದವರು ಒದಗಿಸತಕ್ಕ ಬೋಟುಗಳೆಷ್ಟು ಮತ್ತು ಅಗ್ರಿಕಲ್ಚರಲ್ ರೀಫೈನಾನ್ಸಿಂಗ್ ಕಾರ್ಪೊರೇಷನ್ನಿನವರು ಒದಗಿಸತಕ್ಕ ಬೋಟುಗಳ ಸಂಖ್ಯೆ ಎಷ್ಟು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮೊದಲು ನಾವೇ ಕೊಡುತ್ತಿದ್ದೆವು. ಈಗ ಆದನ್ನ ಬದಲಾವಣೆ ಮಾಡಿದೆ.

ಶ್ರೀ ರತ್ನಕುಮಾರ್ ಕಟ್ಟೆಮಾರ್.—ಸರ್ಕಾರಕ್ಕೆ ಮೊದಲು ಕೊಟ್ಟಿದ್ದ ಅರ್ಜಿಗಳೇನಿವೆ ಅವುಗಳನ್ನು ಆ ಫೆಡರೇಷನ್ನಿಗೆ ವರ್ಗಾಯಿಸಿದಮೇಲೆ ಅಲ್ಲಿ ಅವುಗಳ ಬಗ್ಗೆ ಬಹಳ ಪಕ್ಷಪಾತ ಹಾಗೂ ತಾರತಮ್ಯ ಭಾವನೆಯಿಂದ ಕಾಣಲಾಗುತ್ತಿದೆ. ಆದ್ದರಿಂದ ಅಂಥ ಜನರ ಅನುಕೂಲಕ್ಕಾಗಿ ಇಂಥದೇ ಇನ್ನೊಂದು ಫೆಡರೇಷನ್ ಸ್ಥಾಪಿಸುವುದಕ್ಕೆ ಅವಕಾಶ ಕೊಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಒಂದನ್ನು ಸರಿಯಾಗಿ ನಡೆಸಿಕೊಂಡುಹೋದರೆ ಸಾಕು ಎಂಬುದು ಸರ್ಕಾರದವರ ಅಭಿಪ್ರಾಯ. ಆದ್ದರಿಂದ ಇನ್ನೊಂದಕ್ಕೆ ಅವಕಾಶಕೊಡುವುದ ಕ್ಕಾಗುವುದಿಲ್ಲ.

ಶ್ರೀ ಎಂ. ಎಂ. ಜಾಲಿಸತಿಗಿ.—ಸರ್ಕಾರದವರು ಖರೀದಿಮಾಡತಕ್ಕ ಬೋಟುಗಳಲ್ಲಿ ಎಷ್ಟು ಶಿಲ್ಕು ಉಳಿದಿವೆ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಎಲ್ಲವನ್ನೂ ಅಲಾಟ್‌ಮಾಡಿ ಆಗಿದೆ. ಶಿಲ್ಕು ಯಾವುದೂ ಉಳಿದಿಲ್ಲ.

Supply of Electricity to Pumps in North Kanara District

298. Sri D. S. NADKARNI (Ankola).—

Will the Chief Minister be pleased to state.—

(*a*) the total number of pumps sets in North Kanara district to which electricity was supplied during 1968-69 (Talukwar information may please be furnished) ;

(*b*) the number of applications for pumpsets, received from each taluk in North Kanara district during 1969-70 ;

(*c*) out of them the number of pumsets to which it may be possible to supply electricity ?

Sri D. PARAMESWARAPPA (Deputy Minister for Major Irrigation and Electricity) [on behalf of Sri VEERENDRA PATIL Chief Minister)].—

(*a*) 379 (Details *vide* statement 'A' appended).